ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಎಡಿಎಂ2(2) ಸ್ವ.ಆ.01/2015-16. ದಿನಾಂಕ: 30-10-2015

**ಸುತ್ತೋಲೆ**

ವಿಷಯ:-ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಶಾಲೆಗಳು ಹಾಗೂ ಅನುದಾನಿತ/ ಮತ್ತು ಅನುದಾನರಹಿತ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ದಿನಾಂಕ:1-11-2015 ರಿಂದ 15-11-2015ರ ವರೆಗೆ ಸ್ವಚ್ಛತಾ ಆಂದೋಲನವನ್ನು ನಡೆಸುವ ಬಗ್ಗೆ.

ಉಲ್ಲೇಖ:-1. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಪತ್ರ ದಿನಾಂಕ:12-10-2015

2.ಈ ಕಛೇರಿಯ ಪತ್ರ ಸಮ ಸಂಖ್ಯೆ: ಎಡಿಎಂ2(2)ಸ್ವ.ಆ.01/2015-16 ದಿನಾಂಕ:29.09.2015

@@@@@@

1. ಭಾರತ ಸರ್ಕಾರದ ಮಾನವ ಸಂಪೂನ್ಮೂಲ ಅಭಿವೃದ್ಧಿ ಇಲಾಖೆಯು ಶಿಕ್ಷಣ ಸಂಸ್ಥೆಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಹಮ್ಮಿಕೊಳ್ಳುವ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ಸೂಚನೆಯನ್ನು ನೀಡಲಾಗಿದೆ. ಸದರಿ ಸೂಚನಾ ಪತ್ರದಲ್ಲಿ ಆಂದೋಲನದ ರೂಪುರೇಷೆಗಳನ್ನು ಮತ್ತು ಹಮ್ಮಿಕೊಳ್ಳಬಹುದಾದ ಕಾರ್ಯಚಟುವಟಿಕೆಗಳ ಕುರಿತಂತೆ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗಿದೆ.
2. ಈ ಪ್ರಯುಕ್ತ ದಿನಾಂಕ:1-11-2015 ರಿಂದ 15-11-2015 ರವರೆಗೆ ರಾಜ್ಯದ ಎಲ್ಲಾ ಸರ್ಕಾರಿ,ಅನುದಾನಿತ, ಅನುದಾನರಹಿತ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಸ್ವಚ್ಛತಾ ಆಂದೋಲನದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬೇಕು.
3. ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಬಗ್ಗೆ ಮತ್ತು ಕಾರ್ಯ ಚಟುವಟಿಕೆಗಳನ್ನು ಪೂರೈಸುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಗಾವಹಿಸಬೇಕು, ಆಯಾ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರು ಕಾರ್ಯಕ್ರಮದ ಯಶಸ್ಸಿಗೆ ಶ್ರಮವಹಿಸಲೇಬೇಕು.

**ಶಾಲೆಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು:**

1. ಶಾಲಾ ಆವರಣದಲ್ಲಿ ಸ್ವಚ್ಛತೆಯನ್ನು ಸಾಧಿಸಲು ಇರುವ ಬಾಧಕ ಅಂಶಗಳನ್ನು ಗುರುತಿಸಿ ಸ್ವಚ್ಛತೆಯನ್ನು ಸಾಧಿಸಬೇಕು.
2. ಶಾಲಾವಾರು ಹಾಗೂ ಘಟಕವಾರು ತಂಡಗಳನ್ನು ರಚಿಸಿ ಶಾಲೆಯ ಮುಖ್ಯಸ್ಥರು 15 ದಿನಗಳ ಅವಧಿಯ ಅಂತ್ಯದ ವೇಳೆಯಲ್ಲಿ ಸಾಧಿಸಿದ ಪ್ರಗತಿ ಕುರಿತಂತೆ ಪರಾಮರ್ಶಿಸಬೇಕು.
3. ಈ ಆಂದೋಲನದಲ್ಲಿ ಅತ್ಯಂತ ಯಶಸ್ವಿ ಪಾತ್ರ ವಹಿಸಿದ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವುದು.
4. ನಿಮ್ಮ ವ್ಯಾಪ್ತಿಯ ಶಾಲೆಗಳ ಮಧ್ಯೆ ಸ್ವಚ್ಛತೆ ಕುರಿತಂತೆ ಸ್ಪರ್ಧಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.
5. ಹೆಚ್ಚಿನ ಸ್ವಚ್ಛತೆಯನ್ನು ಸಾಧಿಸಿದ ಶಿಕ್ಷಣ ಸಂಸ್ಥೆಯನ್ನು ಗೌರವಿಸಬೇಕು.
6. ಪ್ರತಿ ಶಾಲೆಯಲ್ಲಿ ಸ್ವಚ್ಛತೆ ಕಾರ್ಯ ಚಟುವಟಿಕೆಗಳಿಗೆ ಮಕ್ಕಳ ಪೈಕಿ ನೇತೃತ್ವ ವಹಿಸಲು ಒಬ್ಬ ವಿದ್ಯಾರ್ಥಿಯನ್ನು ಗುರುತಿಸಬೇಕು.
7. ಸ್ವಚ್ಛತಾ ಕಾರ್ಯಕ್ರಮದ ಮುಂದಾಳತ್ವ ವಹಿಸಿದ ವಿದ್ಯಾರ್ಥಿಗೆ ಪಾರಿತೋಷಕವನ್ನು ನೀಡಬೇಕು.
8. ಶಾಲೆಯಲ್ಲಿ ಲಭ್ಯವಿರುವ ಶೌಚಾಲಯ ಇತ್ಯಾದಿ ಸೌಲಭ್ಯಗಳ ಕುರಿತಂತೆ ಶಿಕ್ಷಕರು ಮತ್ತು ಮಕ್ಕಳ ನಡುವೆ ಚರ್ಚೆಗೆ ವೇದಿಕೆಯನ್ನು ಕಲ್ಪಿಸಬೇಕು.
9. ಪ್ರತಿ ಮಗುವಿನೊಂದಿಗೆ ಶಿಕ್ಷಕರು ಚರ್ಚೆಗಳನ್ನು ಹಮ್ಮಿಕೊಳ್ಳಬೇಕು.
10. ಚರ್ಚೆಯ ಆಧಾರದಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. ಇವರಲ್ಲಿ ಭೌತಿಕ ಸೌಲಭ್ಯಗಳನ್ನು ಪರಿಶೀಲಿಸಿ ಮುರಿದು ಹೋಗಿರುವ ಸಲಕರಣೆಗಳನ್ನು ಸರಿಪಡಿಸುವುದು.
11. ಸ್ವಚ್ಛ ಭಾರತ ಅಭಿಯಾನ ಕುರಿತಾದ ರಸ ಪ್ರಶ್ನೆ ಕಾರ್ಯಕ್ರಮಗಳನ್ನು ಸಂಘಟಿಸಬೇಕು ಹಾಗೂ ಚಿತ್ರಪಟ ತಯಾರಿಕೆ ಸ್ಪರ್ಧೆಗಳನ್ನು ಏರ್ಪಡಿಸಬೇಕು.
12. ಮಕ್ಕಳ ಪೈಕಿ ಸ್ವಚ್ಛ ಭಾರತ ರಾಯಭಾರಿಗಳನ್ನು ನಾಮಾಂಕಿತ ಮಾಡಬೇಕು ಹಾಗೂ ಅಂತಹಾ ಮಕ್ಕಳಿಗೆ ಶಾಲಾ ಸಂಘದಲ್ಲಿ ಸ್ಥಾನವನ್ನು ಕಲ್ಪಿಸಿ ಹೆಚ್ಚಿನ ಜವಾಬ್ದಾರಿಯನ್ನು ನೀಡಬೇಕು.

13. ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ತಮ್ಮ ಶಾಲೆಯನ್ನು ಹಾಗೂ ಅವರ ಪರಿಸರದಲ್ಲಿ ಗರಿಷ್ಠ ಸ್ವಚ್ಛತೆಯನ್ನು ಸಾಧಿಸಲು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಬೇಕು. ಸದರಿ ಕಾರ್ಯಾಗಾರದಲ್ಲಿ ಲಭ್ಯವಿರುವ ಅತ್ಯಂತ ಉತ್ತಮವಾದ ಸ್ಥಳೀಯ ಕಾರ್ಯವಿಧಾನಗಳ ಕುರಿತಂತೆ ತರಬೇತಿಯನ್ನು ನೀಡಬೇಕು (solid waste management) ಘನ ತ್ಯಾಜ್ಯವಸ್ತುಗಳ ನಿರ್ವಹಣೆ ಹಾಗೂ ಕಾಗದದ ಪುನರ್ (Paper recycling) ಬಳಕೆ ಕುರಿತಂತೆ ಅರಿವು ಮೂಡಿಸಬೇಕು.
14. ಜಲ ಶುದ್ದೀಕರಣ ಉಪಕರಣಗಳನ್ನು ಅಳವಡಿಸಿ ಶುದ್ಧ ನೀರಿನ ಸೌಲಭ್ಯವನ್ನು ಕಲ್ಪಿಸಲು ಕ್ರಮ ಕೈಗೊಳ್ಳಬೇಕು.
15. ಶಾಲೆಯ ಆವರಣದಲ್ಲಿರುವ ಕ್ಯಾಂಟೀನ್/ಅಡುಗೆ ಕೋಣೆಗಳು ಮತ್ತು ಊಟದ ಸ್ಥಳವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಮುಖಾಂತರ ಶುದ್ಧ ಆಹಾರ ಲಭ್ಯಪಡಿಸಬೇಕು, ಉಳಿಯುವ ಆಹಾರವನ್ನು ಸೂಕ್ತವಾಗಿ ಬಳಸಲು ಕ್ರಮ ಕೈಗೊಳ್ಳಬೇಕು.
16. ಶಾಲೆಯ ಸುತ್ತ-ಮುತ್ತಲಿನ ಪ್ರದೇಶವನ್ನು ಶುದ್ದಗೊಳಿಸಲು ಶಾಲೆಯ ಶಿಕ್ಷಕರು ಹಾಗೂ ಮಕ್ಕಳು ಒಟ್ಟಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆ "ನಿಗಧಿತ ದಿನಗಳನ್ನು ಗೊತ್ತು ಪಡಿಸಿಕೊಳ್ಳಬೇಕು" ಇದರಿಂದ ಸ್ವಚ್ಛತೆಯ ಕುರಿತಂತೆ ಮಕ್ಕಳಿಗೆ ಇಡೀ ಪ್ರದೇಶದ ತಿಳುವಳಿಕೆ ಹಾಗೂ ಇತರೆ ಶಾಲಾ ಮಕ್ಕಳೊಂದಿಗೆ ಕೈ ಜೋಡಿಸುವ ಒಂದು ಅವಕಾಶ ಕಲ್ಪಿಸಬೇಕು.
17. ಸ್ವಚ್ಛ ಭಾರತ ಆಂದೋಲನವನ್ನು ಬಿಂಬಿಸುವ ಸ್ತಬ್ಧ ಚಿತ್ರಗಳನ್ನು/ಮಾದರಿಗಳನ್ನು ಪ್ರಚುರಪಡಿಸಬೇಕು ಹಾಗೂ ಮಹಾತ್ಮಾ ಗಾಂಧಿಯವರ ಸ್ವಚ್ಛ ಭಾರತ ಕುರಿತಾದ ಅಭಿಪ್ರಾಯಗಳನ್ನು ಆಧಾರಿಸಿದ ನಾಟಕಗಳನ್ನು ಆಡುವುದು ಮುಂತಾದ ಕಾರ್ಯಕ್ರಮ ಹಮ್ಮಿಕೊಳ್ಳತಕ್ಕದ್ದು ಇದರಿಂದ ಮಕ್ಕಳಲ್ಲಿ ಸ್ವಚ್ಚತೆಯನ್ನು ಸಾಧಿಸುವಲ್ಲಿ ಉತ್ಸಾಹ ಹೆಚ್ಚಿಸಬಹುದಾಗಿರುತ್ತದೆ.

30/X/15

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1) ಸರ್ಕಾರದ ಪ್ರದಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಬಹುಮಹಡಿಗಳ ಕಟ್ಟಡ ಬೆಂಗಳೂರು-1,
2) ನಿರ್ದೇಶಕರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,ಮಲ್ಲೇಶ್ವರಂ, ಬೆಂಗಳೂರು,
3) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋದನೆ ಮತ್ತು ತರಬೇತಿ ಇಲಾಖೆ, 100 ಅಡಿ ರಸ್ತೆ, ಬನಶಂಕರಿ 3ನೇ ಹಂತ ಹೊಸಕೆರೆಹಳ್ಳಿ ರಸ್ತೆ, ಬೆಂಗಳೂರು,
4) ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ ರಸ್ತೆ, ಬೆಂಗಳೂರು,
5) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ)ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ,
6) ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ (ಉಪನಿರ್ದೇಶಕರ ಮುಖಾಂತರ)ಅಧೀನ ಶಾಲೆಗಳಿಗೆ ಅಗತ್ಯ ಸೂಚನೆ ಹೊರಡಿಸಲು ಹಾಗೂ ಕ್ರಮಕೈಗೊಳ್ಳಲು ತಿಳಿಸಿ.